508,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮಂತ್ರಿಯವರು ಮತ್ತು ವೈದ್ಯಕೀಯ ಶಿಕ್ಷಣ ಮಂತ್ರಿಯವರು ಉಪಸ್ಥಿತರಿಲ್ಲದ ಕಾರಣ ನಾಳೆ ಬೇಡಿಕೆಗಳನ್ನು ಮಂಡಿಸುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ ನಾನು ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳ ಬಗ್ಗೆ ಅಡ್ಜರ್ನ್‌ಮೆಂಟ್ ಮೋಶನ್ ಮೂವ್ ಮಾಡಲು ಕೇಳಿಕೊಂಡಿದ್ದೆ. ತಾವುಗಳು ಅನುಮತಿ ಕೊಟ್ಟರೆ ಪ್ರಾರಂಭ ಮಾಡುತ್ತೇನೆ. ಇದು ಬಹಳ ಪ್ರಮುಖವಾದ ವಿಷಯ.

ಅಧ್ಯಕ್ಷರು: ಈಗ ಬೇಡ ನಾಳೆ ತೆಗೆದುಕೊಳ್ಳೋಣ. ಸರಕಾರಿ ಕಾರ್ಯಕಲಾಪಗಳು ಕೂಡ ಸ್ವಲ್ಪ ನಡೆಯಬೇಕಲ್ಲವೆ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ನಿಯಮ 69 ಪ್ರಕಾರ ಮಾನ್ಯ ಸಿಂಧ್ಯರವರು ಮತ್ತಿತರ ಮಾನ್ಯ ಶಾಸಕರು ಮೂವ್ ಮಾಡಿದ್ದರು. ಈಗಾಗಲೇ ಡಿಸಿಯವರಿಂದ ಪ್ರೊಪೋಸಲ್ಸ್ ಬಂದು ಗೆಜೆಟ್ ನೋಟಿಫಿಕೇಶನ್ ಆಗಿರತಕ್ಕಂಥಾದ್ದು ಮುಂತಾಗಿ ನಡೆಯುವಂಥ ಸಂದರ್ಭದಲ್ಲಿ ಎಲ್ಲಿ ಇಂಥ ವಿಚಾರವು ನಿಷ್ಪಕ್ಷಪಾತವಾಗಿ ಆಗಿಬೇಕಾಗಿತ್ತೋ ಅದು ಆಗಲಾರದೆ ರಾಜಕೀಯ ಮತ್ತಿತರ ಒತ್ತಡದಿಂದ ಮತ್ತು ಹಸ್ತಕ್ಷೇಪದಿಂದಾಗಿ ಒಂದೊಂದು ತಾಲ್ಲೂಕಿನಲ್ಲಿ ನಿರ್ದಿಷ್ಟವಾಗಿ ಇಂಪಾರ್‌ಶಿಯಲ್ ಆಗಿ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಕೆಲವೊಂದು ತಾಲೂಕಿನಲ್ಲಿ 3-4 ರಿಸರ್‌ವೇಶನ್ ಆಗಿದೆ. ಕೆಲವು ಕಡೆ ಇನ್ನೂ ಹೆಚ್ಚು. ಜನರಲ್ ಇಲ್ಲವೇ ಇಲ್ಲ. ಈ ರೀತಿಯಾಗಿ ಅನ್ಯಾಯಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಎದ್ದುಕಾಣುತ್ತಿದೆ. ಆದ್ದರಿಂದ ಯಾವ ತಾಲ್ಲೂಕಿನಲ್ಲಿ ಇಂಥ ಅನ್ಯಾಯವಾಗಿದೆ, ಎಲ್ಲಿ ಹಸ್ತಕ್ಷೇಪವಾಗಿದೆ, ಮುಂತಾಗಿ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಅಲ್ಲಿ ಇದ್ದ ಕ್ಷೇತ್ರದ ಶಾಸಕರು, ರೂಲಿಂಗ್ ಪಾರ್ಟಿ ಶಾಸಕರು ಇರಬಹುದು, ಅಥವಾ ಅಲ್ಲಿ ಕಾರ್ಯಕರ್ತರಿರಬಹುದು. ಇದರ ಬಗ್ಗೆ ಇವತ್ತು ಸರ್ಕಾರದ ಗಮನಕ್ಕೆ ತರುವುದು ಬಹಳ ಅವಶ್ಯಕತೆ ಇದೆ. ಯಾವ ತಪ್ಪು ಕೆಲಸವನ್ನು ಮಾಡುತ್ತಿದ್ದಾರೆ, ಅದರಿಂದ ಏನು ಸಿಗದೆ ಹೋಗುತ್ತಿದೆ, ಈ ಒಂದು ಸಮಾಜದಲ್ಲಿ, ರಾಜಕೀಯ ವ್ಯವಸ್ಥೆಯಲ್ಲಿ ಯಾವ ರೀತಿ ವ್ಯವಸ್ಥೆ ನಿರ್ಮಾಣವಾಗುತ್ತಿದೆ ಎನ್ನುವುದನ್ನು ನೋಡಬೇಕಾಗಿದೆ. ಒಂದು ಕಲುಷಿತ ವಾತಾವರಣ, ಅದರಿಂದ ಹಲವಾರು ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವಂಥ ವಾತಾವರಣ, ಇದರ

ಬಗ್ಗೆ ಪ್ರಸ್ತಾಪ ಮಾಡುವುದು ಅವಶ್ಯಕತೆ ಇದೆ. ಇದು ಬಹಳ ಮಹತ್ವದ ವಿಷಯ. ಇವತ್ತು ಬೆಳಿಗ್ಗೆಯೂ ನಮ್ಮ ಉಪನಾಯಕರು ಅದರ ಬಗ್ಗೆ ಪ್ರಸ್ತಾಪವನ್ನು ಮಾಡಿದರು. ಅಡ್ಜರ್ನ್‌ಮೆಂಟ್ ಮೋಷನ್‌ಗೆ ತಾವು ಅವಕಾಶ ಕೊಡಬೇಕೆಂದು ಹೇಳಿ ಅವರು ವಿನಂತಿಯನ್ನು ಮಾಡಿಕೊಂಡ ಮೇಲೆ ಪ್ರಶ್ನೋತ್ತರ ಮುಗಿದಮೇಲೆ ಇದರ ಬಗ್ಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ತಾವೂ ಕೂಡ ಹೇಳಿದ್ದಿರಿ. ಇದೊಂದು ಮಹತ್ವದ ವಿಷಯ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕಾಗಿದೆ. ಇದರ ಬಗ್ಗೆ ನಾನು ಪ್ರಿಲಿಮಿನರಿಯಾಗಿ ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ದಯವಿಟ್ಟು ಬೇಡಿ. ಈಗ ನಾನು ಹೇಳುವುದನ್ನು ಕೇಳಿ. ತಾವು ಹೇಳಿದ್ದನ್ನು ಕೇಳಿದ್ದೇನಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ತಾವು ನಿನ್ನೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಾವೆಲ್ಲರೂ ಸಹಿತ ಕೊಟ್ಟಂಥ ಇದೇ ವಿಚಾರದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಇದು ನಿನ್ನೆ ಕಾರ್ಯಕಲಾಪಗಳು ಪಟ್ಟಿಯಲ್ಲೂ ಸಹಿತ ಬಂದಿತ್ತು. ಇವತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯಾದಮೇಲೆ ಇದು ಬರುತ್ತದೆಂದು ಹೇಳಿ ನಾನು ಭಾವಿಸಿಕೊಂಡಿದ್ದೆ. ಆದರೆ, ನಾನು ನಿನ್ನೆ ರಾತ್ರಿ ಕಾರ್ಯಕಲಾಪಗಳ ಪಟ್ಟಿಯನ್ನು ನೋಡಿದಾಗ ಅದು ಇರಲಿಲ್ಲ. ಅವರು ನಿಲುವಳಿ ಸೂಚನೆ ಬಗ್ಗೆ ಕೇಳಿದ್ದಾರೆ, ನಾವು ನಿಯಮ 69ರ ಅಡಿಯಲ್ಲಿ ಕೇಳಿದ್ದೇವೆ, ಒಟ್ಟಾರೆ ಇದು ಚರ್ಚೆಗೆ ಒಂದು ಅವಕಾಶವಾಗಬೇಕೆನ್ನುವ ದೃಷ್ಟಿಯಿಂದಾಗಿ ಕೇಳಿದ್ದೇವೆ. ಬಹಳಷ್ಟು ಜನ ಆಡಳಿತ ಪಕ್ಷದ ಶಾಸಕರುಗಳಿಗೂ ಸಹಿತ ತೊಂದರೆಯಾಗಿದೆ ಮತ್ತು ನಮಗೂ ಸಹಿತ ಬಹಳ ತೊಂದರೆಯಾಗಿದೆ. ಹಿಂಸೆಯಾಗಿದೆ ಎನ್ನುವ ವಿಚಾರ. ಘೋರ್ಪಡೆಯವರ ಮನಃಸಾಕ್ಷಿ ಪ್ರಕಾರ ಇದೆಲ್ಲಾ ಆಗಿದ್ದಿದ್ದರೆ ಈ ಗೊಂದಲವಾಗುತ್ತಿರಲಿಲ್ಲ. ಅವರ ಮನಸ್ಸಾಕ್ಷಿಯ ವಿರುದ್ಧವಾಗಿ ಇದೆಲ್ಲವೂ ಸಹಿತ ಆಗಿರುವುರಿಂದಾಗಿ ನಾವುಗಳು ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದೇವೆ. ದಯಮಾಡಿ ತಾವು ಇದರ ಬಗ್ಗೆ ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕು ಬೇಕಾದರೆ ಸಮಯವನ್ನು ನಿಗದಿಮಾಡಿ.

(ಗೊಂದಲ)

ಅಧ್ಯಕ್ಷರು: ಮತ್ತೆ ರಿಪೀಟ್ ಮಾಡುವ ಅಗತ್ಯವಿಲ್ಲ. ಈ ರೀತಿ ಐದಾರು ಜನ ಎಲ್ಲಾ ವಿಷಯದ ಮೇಲೆ ಮಾತನಾಡಿದರೆ ನಮಗೆ ಸಮಯವೆಲ್ಲಿದೆ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ನಮಗೆ ಅವಕಾಶವನ್ನು ಮಾಡಿಕೊಡದಿದ್ದರೆ ನಮ್ಮ ಹಕ್ಕನ್ನು

ಮೊಟಕುಗೊಳಿಸಿದಂತಾಗುವುದಿಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಇದು.....

ಅಧ್ಯಕ್ಷರು: ಒಂದು ಪಾರ್ಟಿಯಿಂದ ಐದಾರು ಜನರು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಯಾವ ಸೂಚನೆಯ ಆಧಾರದ ಮೇಲೆ ಮಾಡಿದ್ದಾರೆಂದು ಹೇಳಿಕೆ ಕೊಟ್ಟರೆ ಸಾಕು.

(ಗೊಂದಲ)

ಅಧ್ಯಕ್ಷರು: ಐದಾರು ಜನ ಒಟ್ಟಿಗೆ ಮಾತನಾಡುತ್ತಿರುವುದರಿಂದ ಯಾವುದನ್ನು ರೆಕಾರ್ಡ್ ಮಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು. ಯಾವುದೇ ರೀತಿಯಲ್ಲೂ ತಾವು ಕೋಪಿಸಿಕೊಳ್ಳುವಂಥದ್ದಲ್ಲ. ನಾವು ಹೇಳುತ್ತಿರುವುದು ಬಹಳ ಮಹತ್ವವಾದ ವಿಷಯ ಇದೆ. ಇದರ ಬಗ್ಗೆ ಪ್ರಸ್ತಾಪಮಾಡಲು ನಾವು ಕಳೆದ ವಾರದಿಂದಲೂ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ಯಾವ ಹಂತಕ್ಕೆ ಬಂತು. ಪ್ರತಿಯೊಂದು ಕ್ಷೇತ್ರದಲ್ಲೂ ಇವತ್ತು ಪ್ರತಿಯೊಬ್ಬ ಶಾಸಕರು ಬಂದು ಹೇಳುತ್ತಿದ್ದಾರೆ. ನಮ್ಮ ಕ್ಷೇತ್ರದಲ್ಲೂ ಇವತ್ತು ಅನ್ಯಾಯವಾಗುತ್ತಿದೆ.

ಅಧ್ಯಕ್ಷರು: ಇಷ್ಟು ಹೊತ್ತು ತಾವು ಹೇಳಿದರಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾಳೆ ನಾಡಿದ್ದು ಎನ್ನುವುದಲ್ಲ. ಇವತ್ತೇ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿ. ಇದು ಇವತ್ತು ಸರ್ಕಾರದ ಗಮನಕ್ಕೆ ತರುವುದು ಬಹಳ ಅವಶ್ಯಕತೆ ಇದೆ. ಏನು ಅನ್ಯಾಯ ನಡೆಯುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ. ಇವತ್ತೇನು ಹಸ್ತಕ್ಷೇಪ ಮಾಡುತ್ತಿದ್ದಾರೆ ಎನ್ನುವುದನ್ನು ಹೇಳಬೇಕಾಗಿದೆ. ಪ್ರತಿಯೊಂದು ಊರಿನಲ್ಲೂ ಇದು ನಡೆಯುತ್ತಿದೆ. ಕೆಲವೊಂದು ತಾಲ್ಲೂಕುಗಳ ಬಗ್ಗೆ ಮಾತನಾಡುವುದು ಇದೆ. ಇದರ ಬಗ್ಗೆ ಎಲ್ಲಾ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಾ ತಾವು ಕೂಡ ಇದಕ್ಕೆ ಪುರಸ್ಕಾರ ಕೊಡುತ್ತೀರಿ ಎನ್ನುವ ಭರವಸೆ ಕೂಡ ನನಗೆ ಇದೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರುಗಳು ನಿಲುವಳಿ ಸೂಚನೆಯನ್ನು

ಎತ್ತಿದ್ದು ನಿಜ. ಆದರೆ ನಿನ್ನೆ ನಾನು ಈ ರಿಸರ್ವೇಷನ್ ಬಗ್ಗೆ ರೂಲ್ 69ರಲ್ಲಿ ಅಲೊ ಮಾಡಿದ್ದೆ. ಒಂದು ಸಲ ರೂಲ್ 69ರಲ್ಲಿ ಅಲೊ ಮಾಡಿದ ಮೇಲೆ ಪುನಃ ನಾವು ನಿಲುವಳಿ ಸೂಚನೆಯನ್ನು ಇಲ್ಲಿ ಅಡ್ಮಿಟ್ ಮಾಡುವುದಕ್ಕಾಗಲೀ ಕೊನೆಗೆ ಸಬ್‌ಮಿಷನ್‌ಗಾಗಲೀ ಇಲ್ಲಿ ಅಲೋ ಮಾಡುವುದಕ್ಕಾಗುವುದಿಲ್ಲ. ಎರಡನೆಯದು ಸರ್ಕಾರಿ ಕೆಲಸ ಕುಂಠಿತವಾಗುತ್ತಿದೆ. ಬೇಡಿಕೆಗಳ ಬಗ್ಗೆ ಚರ್ಚೆಯನ್ನು ನಾವು ಕಳೆದ ಶುಕ್ರವಾರವೇ ಮಾಡಬೇಕಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾಳೆ ನಿಯಮ 69 ರಲ್ಲಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು. ನಾಳೆ ತೆಗೆದುಕೊಳ್ಳೋಣ.

ಬೇಡಿಕೆ ಸಂಖ್ಯೆ:50 - ವೈದ್ಯಕೀಯ ಶಿಕ್ಷಣ

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ದಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವೈದ್ಯಕೀಯ ಶಿಕ್ಷಣ' ಇಲಾಖಾ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 218,20,67,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 250,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 51 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು'' ಇಲಾಖಾ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 751,20,15,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 87,33,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.